# ಕೊಡಗಿನ ಗೌರಮ್ಮ ನವರ ಕಥೆಗಳಲ್ಲಿ ಧರ್ಮದ ನೆಲೆ

**ಶೋಭಾ ಎನ್**

ಸಹಾಯಕ ಪ್ರಾಧ್ಯಾಪಕರು,

ಸ.ಪ್ರ.ದ ಕಾಲೇಜು,ಯಲಹಂಕ,ಬೆಂಗಳೂರು ೬೪

ನವೋದಯ ಕಾಲ ಘಟ್ಟದ ಪ್ರಮುಖ ಕಥೆಗಾರ್ತಿ ಕೊಡಗಿನ ಗೌರಮ್ಮ . ಕೊಡಗಿನ ಮಡಿಕೇರಿಯಲ್ಲಿ ೧೯೧೨ ಮಾರ್ಚ್ ೫ ರಂದು ಸಂಪ್ರದಾಯಸ್ಥ ಬ್ರಾಹ್ಮಣ ಕುಟುಂಬದಲ್ಲಿ ಜನಿಸಿದ ಗೌರಮ್ಮ ಎಸ್. ಎಸ್. ಎಲ್.ಸಿ ವರೆಗೆ ವಿದ್ಯಾಭ್ಯಾಸ ಮಾಡಿದ್ದರು.ಇವರಿಗೆ ಸಾಹಿತಿಗಳ ಒಡನಾಟ ಹೆಚ್ಚು ಪದ್ಮಾವತಿ ರಸ್ತೊಗಿ, ಕಲ್ಯಾಣಮ್ಮ, ಮಾಸ್ತಿ, ಬೇಂದ್ರೆ,ಕಾರಂತರು, ಭಾರತಿಸುತ ಹೀಗೆ. ಇವರ ಒಡನಾಟ ಗೌರಮ್ಮ ನವರ ಬರವಣಿಗೆಯನ್ನು ಪುಷ್ಟಿಗೊಳಿಸಿದವು. ಗಾಂಧಿ ಅವರ ಪ್ರಭಾವಕ್ಕೆ ಒಳಗಾಗಿದ್ದ ಗೌರಮ್ಮ ಗಾಂಧೀಜಿಯವರು ಮಡಿಕೇರಿಗೆ ಬಂದಾಗ ಅವರನ್ನು ಭೇಟಿ ಮಾಡಿ ದಲಿತ ಕಲ್ಯಾಣ ನಿಧಿಗೆ ತಮ್ಮ ಒಡವೆಗಳನ್ನು ದಾನ ಮಾಡಿದರು. ನಂತರ ಆಭರಣಗಳನ್ನು ಧರಿಸದೆ ಸರಳವಾಗಿ ಬದುಕಿದ ಅಪರೂಪದ ಲೇಖಕಿ ಗೌರಮ್ಮ . ಶ್ರೀಮತಿ ಬಿ.ಟಿ.ಜಿ ಕೃಷ್ಣ ಎಂಬ ಕಾವ್ಯ ನಾಮದಲ್ಲಿ ಸಾಹಿತ್ಯ ಕೃಷಿ ಮಾಡಿದ ಈಕೆ ೧೯ ನೇ ವಯಸ್ಸಿನಿಂದ ೨೭ ನೇ ವಯಸ್ಸಿ ನವರೆಗೆ ೨೧ ಕಥೆಗಳನ್ನು ಬರೆದಿದ್ದಾರೆ. ಸಾಹಿತ್ಯ ಪ್ರ ಪಂಚದಲ್ಲಿ ಹೆಮ್ಮರವಾಗಿ ನಿಲ್ಲುವ ಪ್ರತಿಭಾವಂತೆಯಾದ ಇವರು ೧೯೩೯ ರಲ್ಲಿ ತಮ್ಮ ೨೭ನೇ ವಯಸ್ಸಿಗೆ ನದಿಯಲ್ಲಿ ಮುಳುಗಿ ದುರಂತ ಮರಣಕ್ಕೀಡಾಗುತ್ತಾರೆ.ಇದು ಸಾಹಿತ್ಯ ಲೋಕದ ದುರಂತವೂ ಹೌದು. ಅವರ ಮರಣ ನಂತರ ಚಿಗುರು, ಕಂಬನಿ ಎಂಬ ಕಥಾಸಂಕಲನಗಳು ಬೇಂದ್ರೆ ಅವರ ಮುನ್ನುಡಿ ಯೊಂದಿಗೆ ಪ್ರಕಟವಾದವು.ಬೇಂದ್ರೆ, ಅವರನ್ನು ತಂಗಿ ಎಂದೇ ಕರೆದು "ಗೌರವಸ್ತ್ರ, ಗೌರಸ್ಮಿತ ಗೌರವದಿ ಗೌರೀ ಮಿಂಚಿದಳದೋ ಬಾನಂಚಿಗೆ ಕಾವೇರಿಯ ಕುವರಿ" ಎಂದು ಗೌರವಿಸಿದ್ದಾರೆ.

೧೯೩೦ ರ ದಶಕದಲ್ಲಿ ರಚನೆಯಾದ ಇವರ ಕಥೆಗಳು ಶಿಕ್ಷಣ,ವರದಕ್ಷಿಣೆ,ವಿವಾಹ, ವಿಧವಾ ಸಮಸ್ಯೆ,ಜೀವನ ಪ್ರೀತಿ,ಜಾತಿ-ಧಾರ್ಮಿಕ ಸಂಘರ್ಷ ಹೀಗೆ ಹಲವು ಸಮಸ್ಯೆಗಳನ್ನು ಕಥಾ ಚೌಕಟ್ಟಿನಲ್ಲಿ ಚಿತ್ರಿಸಿದ್ದಾರೆ. ಸಹಜವಾಗಿ ಆ ಕಾಲಘಟ್ಟ ದಲ್ಲಿ ಸುಶಿಕ್ಷಿತ ಸಂಪ್ರ ದಾಯಸ್ಥ ಮಹಿಳೆಯರು ಎದುರಿಸುತ್ತಿದ್ದ ಕೌಟುಂಬಿಕ ಹಾಗೂ ಸಾಮಾಜಿಕ ಸಮಸ್ಯೆಗಳೇ ಗೌರಮ್ಮ ನವರ ಬಹುತೇಕ ಕಥೆಗಳಲ್ಲಿ ಚಿತ್ರಿತವಾದರೂ ಸಮಾಜದ ಸೂಕ್ಷ್ಮ ಸಂಗತಿಗಳಾಗಿರುವ ಧರ್ಮ,ಜಾತಿ ಯ ಬಗ್ಗೆಯೂ ತಮ್ಮ ಕಥೆಗಳದಲಿ ಚಿತ್ರಿಸುತ್ತಾ ತಮ್ಮ ದೃಷ್ಟಿಕೋನವನ್ನು ಸಂಯಮದಿಂದ ದಾಖಲಿಸಿದ್ದಾರೆ.ಇವರನ್ನು ಕನ್ನಡದ ಪ್ರಥಮ ಬಂಡಾಯ ಹಾಗೂ ಸ್ತ್ರೀವಿಮೋಚನಾವಾದಿ ಚಿಂತಕಿ ಎಂದು ಗುರುತಿಸಲಾಗಿದೆ. ಸಂಪ್ರದಾಯಿಕ ಸಮಾಜದಲ್ಲಿ ಹೆಣ್ಣು ಎದುರಿಸುತ್ತಿದ್ದ ಸಮಸ್ಯೆಗಳನ್ನು ಅವರು ಚಿತ್ರಿಸಿರುವ ರೀತಿಯಲ್ಲೇ ಅವರ ಸುಧಾರಣಾವಾದಿ ದೃಷ್ಟಿಕೋನ, ವೈಚಾರಿಕ ಮನೋಭಾವವನ್ನು ಗುರುತಿಸಬಹುದು. ೧೯೩೦ ರ ಸಂಪ್ರದಾಯದ ವಾತಾವರಣದ ಬಿಗಿಯಲ್ಲಿಯೂ ಗೌರಮ್ಮ ಜಾತಿ-ಧರ್ಮದ ಡಾಂಭಿಕತನವನ್ನು ನಯವಾಗಿಯೇ ಪ್ರಶ್ನಿಸುತ್ತಾ ಮನುಷ್ಯ ಸೃಷ್ಟಿ ಮಾಡಿರುವ ಹಲವು ಧರ್ಮ-ಜಾತಿ ಗಿಂತ

ಮಾನವಧರ್ಮ,ಮನುಷ್ಯ ಪ್ರೀತಿ ದೊಡ್ಡದು ಎಂಬ ಸಂದೇಶವನ್ನು ಮುನ್ನಾದಿನ, ಅಪರಾಧಿ ಯಾರು,ಹೋಗಿಯೇ ಬಿಟ್ಟಿದ್ದ ಕಥೆಗಳಲ್ಲಿ ದಾಖಲಿಸಿದ್ದಾರೆ. ಪ್ರಸ್ತುತ ಲೇಖನ ಈ ಮೂರು ಕಥೆಗಳಲ್ಲಿ ಚಿತ್ರಿತವಾಗಿರುವ ಧರ್ಮದ ನೆಲೆಯನ್ನು ವಿಶ್ಲೇಷಿಸುತ್ತಾ ,ಧರ್ಮದ ಬಗ್ಗೆ ಲೇಖಕಿಯ ದೃಷ್ಟಿಕೋನವನ್ನು ಗ್ರಹಿಸುವ ಪ್ರಯತ್ನ ಮಾಡಿದೆ.

**ಮುನ್ನಾ ದಿನ** ಕಥೆ ಗೌರಮ್ಮ ನವರ ಕೊನೆಯ ಕಥೆ, ಅವರ ಮರಣದ ಹಿಂದಿನ ದಿನ ರಚಿತವಾದದ್ದು. ಈ ಕಥೆಯ ನಾಯಕ ಕಾಡ ಮೇಸ್ತ್ರಿ, ಹುಟ್ಟಿನಿಂದ ಹಿಂದೂ ಗಾಣಿಗ ಸಮುದಾಯಕ್ಕೆ ಸೇರಿದವನು.ಒಂಭತ್ತನೆ ವಯಸಿಗೆ ತಂದೆಯನ್ನು ಕಳೆದುಕೊಳ್ಳುತ್ತಾನೆ,ತಾಯಿ ಎರಡನೆ ಮದುವೆಯಾಗುತ್ತಾಳೆ ಚಿಕ್ಕಪ್ಪನ ಮನೆಯಲ್ಲಿ ಒಂದು ವರ್ಷ ಹೇಗೊ ಕಾಲ ತಳ್ಳುವ ಕಾಡ ಆ ವಾತಾವರಣದಲ್ಲಿ ಇರಲಾರದೆ ತನ್ನ ಹತ್ತನೇ ವಯಸ್ಸಿಗೆ ತಾಯಿಯನ್ನು ತೊರೆದು ಒಡಿ ಹೋಗುತ್ತಾನೆ. ಜೀವನ ನಿರ್ವಹಣೆಗೆ ಕಾಫಿ ತೋಟವೊಂದರಲ್ಲಿಕೆಲಸಕ್ಕೆ ಸೇರುವ ಕಾಡ ತನ್ನ ಪ್ರಾಮಾಣಿಕತೆ,ಚುರುಕುತನದಿಂದ ಬಹಳ ಬೇಗ ಕಾಫಿ ಮಾಲೀಕ(ದೊರೆ)ನ ವಿಶ್ವಾಸ ಗಳಿಸುತ್ತಾನೆ. ಕ್ರಿಶ್ಚಿಯನ್ ಸಮುದಾಯಕ್ಕೆ ಸೇರಿದ ಮಾಲೀಕ ಅವನನ್ನು ಕ್ರಿಶ್ಚಿಯನ್ ಸಮುದಾಯಕ್ಕೆ ಮತಾಂತರಿಸುತ್ತಾನೆ.ಆಗ ಅವನಿಗೆ ೧೨ ವರ್ಷ,ಆ ವಯಸ್ಸಿನಲ್ಲಿ ಜಾತಿ-ಧರ್ಮದ ಅರಿವಿಲ್ಲದ ಕಾಡನಿಗೆ "ಯಾವ ಜಾತಿಯಾದರೇನು,ಯಾವ ಮತವಾದರೇನು? ಹೊಟ್ಟೆ ತುಂಬ ಕೂಳು ಮೈ ತುಂಬ ಬಟ್ಟೆ ಜೊತೆಗೆ ತಿಂಗಳಿಗೆ ಎರಡು ರೂಪಾಯಿ ಸಂಬಳ ಬೇರೆ ಇಷ್ಟೆಲ್ಲ ಸಿಕ್ಕುವಾಗ ಜಾತಿ ನೀತಿ ಎಂದೇಕೆ ಸುಮ್ಮ ನೆ ಪೇಚಾಡಬೇಕು" ಎಂಬ ಮಾತುಗಳು ಕತೆಗಾರ್ತಿಗೆ ಜೀವನ ,ಧರ್ಮ-ಜಾತಿ ಯ ಬಗೆಗಿರುವ ದೃಷ್ಟಿಕೋನವನ್ನು ಧ್ವನಿಸುತ್ತದೆ.ಹೊಟ್ಟೆ ತುಂಬಿದವರು ಮಾತ್ರ ಜಾತಿ-ಧರ್ಮವೇ ಉಸಿರು ಎಂದು ವೈಭವಿಕರಿಸಬಹುದು ಕೂಳಿಲ್ಲದೆ ಹಸಿವಿನಿಂದ ನರಳಿ ಅಭ್ಯಾಸವಿರುವ ಕಾಡನಂತಹವರಿಗೆ ಜಡ ಧರ್ಮಕ್ಕಿಂತ ಬದುಕು ಮುಖ್ಯ ಎಂಬುದನ್ನು ನಯವಾದ ಮಾತುಗಳಲ್ಲಿ ನಿರೂಪಿಸುತ್ತಾರೆ. ಹೀಗೆ ಮತಾಂತರವಾಗಿ ಕಾಡ ಜೋಸಪ್ ಆಗುತ್ತಾನೆ. ಮಾಲೀಕನ ಕೃಪೆಯಿಂದ ಅರೆ-ಬರೆ ಇಂಗ್ಲೀಷ್ ಕಲಿತು ಸಮಾಜ ಇವನನ್ನು ಗುರುತಿಸುವ ಹಂತಕ್ಕೆ ಬೆಳೆಯುತ್ತಾನೆ.ಮಾಲೀಕ ತೋಟವನ್ನು ಮಾರಿ ವಿದೇಶಕ್ಕೆ ಹೋಗುವ ಸಂದರ್ಭದಲ್ಲಿ ಹೊಸ ಮಾಲೀಕನಿಗೆಕಾಡನ ಬಗ್ಗೆಶಿಫಾರಸ್ಸು ಮಾಡುತ್ತಾನೆ ಈ ಹಿನ್ನಲೆಯಲ್ಲಿಅವನಿಗೆ ಮ್ಯಾನೇಜರರ ಕುದುರೆ ಯೋಗಕ್ಷೇಮದ ಕೆಲಸ ಸಿಗುತ್ತದೆ.ಟಪಾಲು ತರಲು ದಿನಕ್ಕೆರಡು ಬಾರಿ ಕುದುರೆ ಯ ಮೇಲೆ ಹೋಗಿ ಬರುತ್ತಿದ್ದ . ಬೀಡಿ ಸೇದುವ ಅಭ್ಯಾಸವಿದ್ದುದರಿಂದ ದಾರಿಯಲ್ಲಿ ಮುಸ್ಲಿಂರ ಬೀಡಿ ಅಂಗಡಿಯಲ್ಲಿ ಬೀಡಿ ಕೊಳ್ಳುವಾಗ ಅಂಗಡಿ ಮಾಲೀಕನ ತಂಗಿ ಹುಸೇನಬಿಯ ಪರಿಚಯವಾಗುತ್ತದೆ. ಪರಿಚಯ ಸ್ನೇಹವಾಗಿ ಪ್ರೀತಿಯಾಗುತ್ತದೆ.ಈ ಪ್ರೀತಿಯ ವಿಚಾರ ಹುಸೇನಬಿಯ ಅಣ್ಣ ಮಮ್ಮು ಕಾಕನಿಗೆ ತಿಳಿದು ಕಾಡನ ಬಗ್ಗೆ ಒಲವಿದ್ದರೂ ಜಾತಿ ಬೆಟ್ಟದಂತೆ ಅಡ್ಡ ವಾಗಿ ನಿಲ್ಲುತ್ತದೆ. ಮಮ್ಮು ಕಾಕನ ಸೂಚನೆಯಂತೆ ಮುಸ್ಲೀಂ ಆಗಲು ಒಪ್ಪುತ್ತಾನೆ. ಇಲ್ಲಿ ಕಾಡನಿಗೆ ಬದುಕು ಮುಖ್ಯ ವೇ ವಿನಾಃ ಜೀವವಿಲ್ಲ ದ ಧರ್ಮವಲ್ಲ . ಅವನ ದೃಷ್ಟಿಯಲ್ಲಿ ಧರ್ಮ-ಜಾತಿಗೆ ಬೆಲೆಯಿಲ್ಲ . ಹೊಟ್ಟೆ ಪಾಡಿಗಾಗಿ ಹೇಗೆ ಕ್ರೈಸ್ತ ನಾದನೋ ಅಷ್ಟೆ ಸಹಜವಾಗಿ ಬದುಕಿನ ಪ್ರೀತಿಗಾಗಿ ಜೋಸ್ ಫ್ ಕಾಡ ಇಸ್ಮಾಯಿಲ್ ಕಾಡ ನಾಗಿ ಹುಸೇನ್ ಬೀಯನ್ನು ಮದುವೆಯಾಗುತ್ತಾನೆ.ಇಲ್ಲಿ ದುಡಿಯುವ ವರ್ಗಕ್ಕೆ ಧರ್ಮವೆಂದರೆ ಮಾನವೀಯತೆ,ಪ್ರೀತಿ,ವಿಶ್ವಾಸ ಎನ್ನುವ ಮೂಲಕ ಮನುಷ್ಯ ಧರ್ಮವೇ ನಿಜ ಧರ್ಮ ಎಂಬುದನ್ನು ಸಾಮಾನ್ಯ ಕಾರ್ಮಿಕ ಕಾಡ ನ ಮುಖಾಂತರ ಚಿತ್ರಿಸಿದ್ದಾರೆ. ಈ ದೃಷ್ಟಿಕೋನ ಇಂದಿನ

ವಿದ್ಯಾವಂತ ಸಮಾಜಕ್ಕೂ ಅರಿವಾಗುವುದು ಅತ್ಯಾವಶ್ಯಕ. ಇಲ್ಲಿ ಗಾಂಧಿವಾದದ ಪ್ರಭಾವವನ್ನು ಗುರುತಿಸಬಹುದು.

**ಅಪರಾಧಿ ಯಾರು ?** ಕಥೆ ಯಲ್ಲಿ ವಿಶಿಷ್ಟ ನಿರೂಪಣ ತಂತ್ರ ವನ್ನು ಕಾಣುತ್ತೇವೆ. ಪತ್ರ ಗಳ ಮುಖೇನ ಕಥೆ ಅನಾವರಣವಾಗುತ್ತದೆ. ಬ್ರಾಹ್ಮಣ ವಿಧವೆಯಾದ ಪಾರ್ವತಿ ರಜಿಯಾಳಾಗುವುದೇ ಇಲ್ಲಿನ ಕಥಾ ವಸ್ತು.ಪುರುಷ ಪ್ರಧಾನ ವ್ಯವಸ್ಥೆಯಲ್ಲಿ ತಮ್ಮ ನೀಚತನವನ್ನು ಮರೆ ಮಾಚಲು ಜಾತಿ-ಧರ್ಮದ ಮೊರೆ ಹೋಗುವ ಪುರುಷರ ಕುಯುಕ್ತಿಯನ್ನು ಕಥೆಗಾರ್ತಿ ಅನಾವರಣಗೊಳಿಸಿದ್ದಾರೆ.ಬ್ರಾಹ್ಮಣ ಸಮುದಾಯಕ್ಕೆ ಸೇರಿದ ಪಂಡಿತರ ಮಗಳು ಪಾರ್ವತಿ ಗಂಡನನ್ನು ಕಳೆದುಕೊಂಡು ಮಗುವನ್ನು ಏಕಾಂಗಿಯಾಗಿ ಸಲುಹಿತಿರುವ ಹೆಣ್ಣು ಮಗಳು.ಬದುಕಿಗಾಗಿ ನಾಗೇಶರಾಯರ ಮನೆಯಲ್ಲಿ ಅಡಿಗೆ ಕೆಲಸ ಮಾಡುತ್ತಿರುತ್ತಾಳೆ ಅವಳ ಅಸಹಾಯಕತೆಯನ್ನೇ ಬಂಡವಾಳ ಮಾಡಿಕೊಂಡ ವರು ನಾಗೇಶರಾಯ. ಸಮಾಜದಲ್ಲಿ ಸಭ್ಯ ,ಮುಖಂಡ ಎಂಬ ಮುಖವಾಡ ಧರಿಸಿದ ಈತ ನೊಂದ ಪಾರ್ವತಿಗೆ ಬದುಕನ್ನು ಕಟ್ಟಿಕೊಳ್ಳಲು ಆಸರೆಯಾಗಿ ನಿಲ್ಲದೆ ಆಕೆಯ ಮೇಲೆ ನಿರಂತರ ಅತ್ಯಾಚಾರ ಮಾಡಿದ ಗೋಮುಖ ವ್ಯಾಘ್ರ . ಇವನ ಅನ್ಯಾಯಕ್ಕೆ ಪಾರ್ವತಿ ಗರ್ಭಿಣಿಯಾದಾಗ ಆಕೆಯ ಮೇಲೆ ಇಲ್ಲ ಸಲ್ಲದ ಆರೋಪ ವರಿಸಿ ಮನೆಯಿಂದ , ಜಾತಿಯಿಂದ ಬಹಿಷ್ಕಾರ ಹಾಕುತ್ತಾರೆ. ಧರ್ಮ ಬಲಿಷ್ಠ ರನ್ನು ಬೆಂಬಲಿಸುವಂತ ಅಸಹಾಯಕರನ್ನು ರಕ್ಷಿಸಲಾರದು ಎಂಬ ನಗ್ನ ಸತ್ಯ ಇಲ್ಲಿ ಅನಾವರಣವಾಗಿದೆ. ದಾರಿ ಕಾಣದ ಪಾರ್ವತಿ ಆತ್ಮಹತ್ಯೆ ಗೆ ಯತ್ನಿಸುವಾಗ ಆಕೆಯನ್ನು ರಕ್ಷಿಸುವುದು ಮುಸ್ಲೀಂ ಸಮುದಾಯದ ಉನ್ನೀಸಾ.ಆಕೆಯ ಮನೆಯಲ್ಲಿ ಆಶ್ರಯ ಪಡುವ ಪಾರ್ವತಿ ಬದುಕಿಗಾಗಿ ಮುಸ್ಲೀಂ ಧರ್ಮಕ್ಕೆ ಮತಾಂತರವಾಗುತ್ತಾಳೆ.ಲಕ್ಷ್ಮಿ ನಳಿನಾಗೆ ಬರೆದ ಪತ್ರದಲ್ಲಿ ಕೇಳುವ ಪ್ರಶ್ನೆಗಳು ಗಮನಾರ್ಹ "ಉತ್ತಮ,ಅತ್ಯುತ್ತಮ ಜಾತಿಯ ನಮ್ಮವರು ಪಾರ್ವತಿಗೆ ಅವಳ ಮುದ್ದು ಮಗುವಿನೊಡನೆ ಬಾವಿಯ ದಾರಿಯನ್ನು ತೋರಿಸಿದಾಗ ಆದರದಿಂದ ಆಶ್ರಯ ನೀಡಿದವಳು ಉನ್ನೀಸಾ.ಉತ್ತಮರು ಯಾರು?ಅವಳೇ? ರಾಯರೇ? ಅಥವಾ ನಮ್ಮ ಕ್ರೂರ ಕಠೋರ ಸಮಾಜವೇ?'' ಎಂಬ ಪ್ರಶ್ನೆಗಳಲ್ಲಿ ಧರ್ಮ ಎಂದರೆ ಮನುಷ್ಯತ್ವ ಎಂಬ ಅಂಶ ಧ್ವನಿತವಾಗಿದೆ. ಧರ್ಮರಕ್ಷ ಣೆಯ ಸೋಗು ಹಾಕಿರುವ ಜನರಲ್ಲಿ ರುವ ಅಮಾನಷತೆ,ಕ್ರೌರ್ಯ ಜನಸಾಮಾನ್ಯರ ಕಣ್ಣಿಗೆ ಕಾಣದೇ ಇರುವುದು ನಮ್ಮ ವ್ಯವಸ್ಥೆಯ ವಿಪರ್ಯಾಸ.ಜಾತಿ-ಧರ್ಮದ ನಿಯಾಮವಳಿಗಳು ಸ್ತ್ರೀಯರಿಗೆ ಮಾತ್ರ ಪುರುಷರಿಗಲ್ಲ ಎನ್ನುವಲ್ಲಿ ಧರ್ಮವನ್ನು ಹೇಗೆ ಹೆಣ್ಣಿನ ಶೋಷಣೆಯ ಅಸ್ತ್ರ ವಾಗಿ ಬಳಸುತ್ತಿದ್ದಾರೆ ಎಂಬುದು ವೇದ್ಯವಾಗುತ್ತದೆ. ಕಥೆಯ ಕೊನೆಯಲ್ಲಿ ''ಹಿಂದೂ ರಮಣಿಯೊಬ್ಬ ಳು ಮುಸಲ್ಮಾನ ಧರ್ಮ ಸ್ವೀಕರಿಸಿದುದು ಊರಿನ ಹಿಂದೂಗಳಿಗೆಲ್ಲಾ ಬಹಳ ವಿಷಾದವನ್ನುಂಟು ಮಾಡಿದೆ .ಇನ್ನು ಮುಂದೆ ಈ ರೀತಿ ಸಂಭವಿಸದಂತೆ ನೋಡಿಕೊಳ್ಳುವುದಕ್ಕಾಗಿ ಊರಿನ ಪ್ರಮುಖ ಹಿಂದೂಗಳ ಸಭೆಯೊಂದು ನಾಗೇಶ ರಾಯರ ಅಧ್ಯ ಕ್ಷ ತೆಯಲ್ಲಿ ನಡೆಯಿತು. ಸಭೆಯಲ್ಲಿ ಸರ್ವಾನುಮತದಿಂದ ಹಿಂದೂ ಧರ್ಮದ ರಕ್ಷ ಣೆ ಮಾಡಬೇಕೆಂದು ತೀರ್ಮಾನವಾಯಿತು" ಇದು ನಮ್ಮ ವ್ಯವಸ್ಥೆಯ ಗೊಡ್ಡು ಸಂಪ್ರದಾಯಕ್ಕೆ ಹಿಡಿದ ಕನ್ನಡಿಯಾಗಿದೆ. ಧರ್ಮದ ನೆಲೆ ಅರಿಯದ ಅಧರ್ಮಿಯರು ಧರ್ಮ ರಕ್ಷಣೆಯ ಸೋಗು ಹಾಕುವುದು ವ್ಯವಸ್ಥೆಯನ್ನು ವಿಡಂಬಿಸುತ್ತದೆ, ಸಮಕಾಲೀನ ಸಂದರ್ಭಕ್ಕೂ ಅನ್ವ ಯಿಸುತ್ತ ದೆ.

**ಹೋಗಿಯೇ ಬಿಟ್ಟಿದ್ದ** ಕಥೆ ಗೌರಮ್ಮ ನವರ ಕಥೆಗಳಲ್ಲೆಲ್ಲಾ ವಿಶಿಷ್ಟ ವಾಗಿ ನಿರೂಪಿತವಾಗಿದೆ.ರೈಲು ಪಯಣ ದಲ್ಲಿ ಮುದುಕನೊಬ್ಬ ಐದು ಜನ ಕಾಲೇಜು ಯುವಕರಿಗೆ ಕಥೆ ಹೇಳುವುದು, ಆರಂಭದಲ್ಲಿ ಯುವಕರಿಗೆ ಕಥೆ

ಕೇಳಲು ನಿರಾಸಕ್ತಿ ಕ್ರಮೇಣ ಅವನೇಳುವ ಕಥೆಯನ್ನು ಆಲಿಸುತ್ತಾರೆ. ಕೊನೆಯವರಿಗೂ ಇದು ಅವನ ಸ್ವಂತ ಕಥೆ ಎಂಬುದು ಯುವಕರಿಗೆ ತಿಳಿಯದಿರುವುದು ಇಲ್ಲಿನ ವಿಶೇಷ. ಮುದುಕ ಅನ್ಯ ರ ಮನೆಯಲ್ಲಿ ಕೂಲಿ ಮಾಡುತ್ತಾ ಬೆಳೆದು ದೊಡ್ಡವನಾದವನು. ಯೌವ್ವನಕ್ಕೆ ಬಂದಾಗ ಲತೀಫಾ ಎಂಬ ಮುಸ್ಲೀಂ ಯುವತಿಯೊಂದಿಗೆ ಪ್ರೇಮಾಂಕುರವಾಗುತ್ತದೆ.ಅವರ ಪ್ರೀತಿಗೆ ಧರ್ಮವೇ ಅಡ್ಡವಾಗುತ್ತದೆ. ಲತೀಫಾಳಿಗೆ ಬೇರೊಬ್ಬರೊಂದಿಗೆ ಬದುಕುವುದಕ್ಕಿಂತ ಅವನ ಕೈಯಿಂದ ಸಾಯುವುದೇ ಲೇಸೆನಿಸುತ್ತದೆ.ಈ ಸಂದರ್ಭದಲ್ಲಿ ಅನಿವಾರ್ಯವಾಗಿ ಆಕೆಯನ್ನು ಕೊಂದು,ತಾನು ಸಾಯುವ ಉದ್ದೇಶದಿಂದ ಬಾವಿಗೆ ಬೀಳುವ ಸಂದರ್ಭದಲ್ಲಿ ಲತೀಫಳ ಚಿಕ್ಕಪ್ಪ ಬದುಕಿಸುತ್ತಾನೆ. ನಂತರ ಸಮಾಜ ಅವನಿಗೆ ಹುಚ್ಚನ ಪಟ್ಟ ಕೊಟ್ಟ ಕಾರಣ ಸುಮಾರು ೩೦ ವರುಷ ಹುಚ್ಚಾಸ್ಪತ್ರೆಯಲ್ಲಿರುತ್ತಾನೆ. ಅಂತಿಮವಾಗಿ '' ಬಿಡುಗಡೆಯಾಯಿತು ಇನ್ನೇನು ಹೋಗಬಹುದಲ್ಲ ಎಂದು ನೀವು ಕೇಳಬಹುದು . ಹೌದು ಹೋಗಬಹುದು ಇಗೋ ಹೊರಟೆ ಹೋಗುತ್ತೇನೆ ''ಎಂದು ಹೇಳುತ್ತಾ ಚಲಿಸುವ ರೈಲಿನಿಂದ ಬಿದ್ದು ಪ್ರಾಣ ಬಿಟ್ಟಿದ್ದ.ಆಗಲೇ ಯುವಕರಿಗೆ ಗೊತ್ತಾಗುವುದು ಮುದುಕ ತನ್ನ ಕಥೆಯನ್ನೇ ಹೇಳುತಿದ್ದ ಎಂದು. ಇಲ್ಲಿ ಸಮಾಜದ ಅನಾರೋಗ್ಯ ಕ್ಕೆ ಜಾತಿ ಎಂಬ ಕಾಯಿಲೆ ಕಾರಣ ,ಇದಕ್ಕೆ ಪರಿಹಾರ ಯುವಜನಾಂಗದಿಂದ ಸಾಧ್ಯ ಎಂಬ ಆಶಯವು ಇಲ್ಲಿದೆ. ಇದನ್ನುಯುವಕರು ರೈಲು ನಿಲ್ಲಿಸುವುದು ಧ್ವನಿಸುತ್ತದೆ. ಅಸ್ವಸ್ತ ಸಮಾಜಕ್ಕೆ ಚಿಕಿತ್ಸೆ ನೀಡದಿದ್ದರೆ ಮನುಷ್ಯ ಮನುಷ್ಯ ನಾಗಿ ಬದುಕಲು ಸಾಧ್ಯವಿಲ್ಲ . ಬದುಕ ಅರಳಿಸುವುದು ಧರ್ಮವೇ ವಿನಾಃ ಬದುಕ ಬಾಡಿಸುವುದು ಧರ್ಮವಲ್ಲ ,ಮಾನವ ಜೀವನವನ್ನೇ ಕಸಿಯುವ ಜಾತಿ,ಧರ್ಮಕ್ಕೆ ಮಹತ್ವ ಕೊಡಬೇಕಾಗಿಲ್ಲ ಎಂಬ ಸಂದೇಶವು ಈ ಕಥೆಯಲ್ಲಿ ಅಡಗಿದೆ.

ಗೌರಮ್ಮನವರ ವೈಚಾರಿಕ, ಪ್ರಗತಿಪರ ನಿಲುವುಗಳಿಂದ ಅವರ ಕಥೆಗಳು ಇಂದಿಗೂ ಪ್ರಸ್ತುತ ಎನಿಸುತ್ತವೆ. ಸಾಮಾಜಿಕ ಸಂವೇದನೆಗಳಿಗೆ ಧ್ವ ನಿಯಾಗಿ ಸಾಂಪ್ರದಾಯಿಕ ಹಿಡಿತಕ್ಕೆ ಸಿಲುಕದೆ ಪ್ರಗತಿಶೀಲ ನಿಲುವುಗಳ ಮೂಲಕ ತಮ್ಮ ದಿಟ್ಟ ತನವನ್ನು ಮೆರೆದಿದ್ದಾರೆ.ಸಾಂಪ್ರದಾಯಿಕ ಬ್ರಾಹ್ಮಣ ಕುಟುಂಬದ ಹಿನ್ನಲೆಯಿಂದ ಬಂದಿದ್ದರೂ ಜಾತಿ-ಧರ್ಮವನ್ನು ಪೋಷಿಸದೆ ಮಾನವ ಧರ್ಮವನ್ನು ಎತ್ತಿ ಹಿಡಿದಿರುವುದು ಅವರ ವ್ಯಕಿತ್ವ ವನ್ನು ಪರಿಚಯಿಸುತ್ತದೆ. ಜಾತಿ,ಮಡಿವಂತಿಕೆ ಮತ್ತು ಧರ್ಮಗಳ ಕಲುಷಿತ ವಾತಾವರಣದಿಂದ ಮಲಿನಗೊಳ್ಳ ದೆ ಸ್ತ್ರೀ ಸಮಾನತೆ, ಜಾತ್ಯಾತೀತ ನಿಲುವು, ಅಂತಃಕರಣ,ಪ್ರೀತಿಗೆ ಆದ್ಯತೆ ನೀಡಿರುವುದು ಗಮನಾರ್ಹ.ಧರ್ಮ ಜಾತಿ ಬದುಕಿನ ಪೋಷಾಕುಗಳೇ ವಿನಾಃ ಅದೇ ಉಸಿರಲ್ಲ, ಧರ್ಮ ಉಳ್ಳವರ ಅಸ್ತ್ರ . ದುಡಿಯುವ ವರ್ಗಕ್ಕೆ ಬದುಕಿನ ಬಗ್ಗೆ ಇರುವ ಪ್ರೀತಿ, ಮಾನವೀಯತೆ, ಅಂತಃಕರಣವೇ ನಿಜವಾದ ಧರ್ಮ ಎಂಬ ನಿಲುವನ್ನು ಅವರ ಕಥೆಗಳು ನಿರೂಪಿಸುತ್ತವೆ.

**ಪರಾಮರ್ಶನ ಕೃತಿಗಳು**

೧.ಕೊಡಗಿನ ಗೌರಮ್ಮ ಬರೆದ ಕಥೆಗಳು(ಸಂ)-ಕಾಳೇಗೌಡ ನಾಗವಾರ, ಕನ್ನಡ ಸಾಹಿತ್ಯ ಪರಿಷತ್ತು,೨೦೧೪

೨.ಮಹಿಳಾ ಸಾಹಿತ್ಯ ಚರಿತ್ರೆ (ಸಂ)- ಎಚ್.ಎಸ್ ಶ್ರೀಮತಿ, ಕನ್ನ ಡ ವಿಶ್ವ ವಿದ್ಯಾಲಯ